### ಮುಕ್ತಾಯ

# ಮನವೊಪ್ಪಿಸುವುದು

ಪೇತ್ರನು ಯೆಹೂದಿ ಜನರಿಗೆ ಬೋಧಿಸಿದ ನಂತರ (ಅಪೊಸ್ತಲರ ಕೃತ್ಯಗಳು 2:14-36.), ಅವರ ಹೃದಯಗಳನ್ನು ಸ್ಪರ್ಶಿಸಿದ ನಂತರ (ಅಪೊಸ್ತಲರ ಕೃತ್ಯಗಳು 2:37.) ಮತ್ತು ರಕ್ಷಿಸಲ್ಪಡ ಬೇಕಾದರೆ ಏನು ಮಾಡಬೇಕೆಂಬುದನ್ನು ತಿಳಿಸಿದ ನಂತರ (ಅಪೊಸ್ತಲರ ಕೃತ್ಯಗಳು 2:38). ವಾಕ್ಯಕ್ಕೆ ಪ್ರತ್ಯುತ್ತರ ಕೊಡಬೇಕೆಂದು ಒಡಂಬಡಿಸಲು ಹುಡುಕುತ್ತಾನೆ (ಅಪೊಸ್ತಲರ ಕೃತ್ಯಗಳು 2:40). ಯೇಸುವಿನ ಚಿತ್ತಕ್ಕೆ ಉತ್ತರ ಕೊಡುವದನ್ನು ಹುಡುಕುವುದು ಕ್ರಿಸ್ತನ ಬಳಿಗೆ ಜನರನ್ನು ತರುವದರ ಮಹತ್ವದ ಭಾಗವಾಗಿದೆ.

ಒಡಂಬಡಿಸುವಿಕೆಯು ವ್ಯಕ್ತಿಯು ತನ್ನ ಮನಸ್ಸಿನಲ್ಲಿ ದೇವರ ಕಡೆಗೆ ಯೋಗ್ಯವಾದ ಉತ್ತರವನ್ನು ಸಾಧಿಸಿಕೊಳ್ಳುವದಕ್ಕೆ ಸಹಾಯ ಮಾಡುವದನ್ನು ಒಳಗೊಂಡಿರತಕ್ಕದ್ದು. ನಮ್ಮ ಚಿತ್ತಕ್ಕೆ ವ್ಯಕ್ತಿಯು ಉತ್ತರ ಕೊಡುವಂತೆ ಒತ್ತಾಯ ಪಡಿಸುವ ಒಂದು ಪ್ರಯತ್ನ ವಾಗಿರಬಾರದು.

ಕಲಿಯುವವನು ಸತ್ಯಕ್ಕೆ ವಿಧೇಯನಾಗುವದನ್ನು ಹುಡುಕುವ ಮೊದಲು ರಕ್ಷಣೆಯ ಬಗ್ಗೆ ಸತ್ಯವನ್ನು ಅರ್ಥಮಾಡಿ ಕೊಳ್ಳುವದನ್ನು ನಿಶ್ಚಿತಪಡಿಸಿಕೊಳ್ಳ ಬೇಕು. ಕಲಿಯುವವನು ವಿಧೇಯತೆಯ ಹಾಗೂ ಅವಿಧೇಯತೆಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಬೇಕು.

ಕಲಿಯುವವನು ಈ ಸಂಗತಿಗಳನ್ನು ಅರ್ಥ ಮಾಡಿಕೊಂಡರೆ, ಆಗ ಶಿಕ್ಷಕನು ತಕ್ಷಣದ ಪ್ರತಿಕ್ರಿಯೆಯ ಮಹತ್ವವನ್ನು ತೋರಿಸಬೇಕು. ಸುವಾರ್ತೆಗೆ ವಿಧೇಯನಾಗಲು ಈಗಿನಕ್ಕಿಂತ ಹೆಚ್ಚು ಉತ್ತಮವಾದ ಸಮಯವನ್ನು ಅವನು ಯೋಚಿಸಬಹುದೋ ಎಂದು ಶಿಕ್ಷಕನು ಪ್ರಶ್ನಿಸಬಹುದು. ಈ ಕೆಳಗಿನ ಪ್ರಯೋಜನಗಳು ಕೂಡಿಸಲ್ಪಡಬಹುದು:

1. ದೇವರಿಗೆ ವಿಧೇಯನಾದರೆ, ಆತನು ನಿನ್ನ ಜೀವನದಲ್ಲಿ ಕಾರ್ಯಮಾಡುವನು.

2. ತನ್ನ ಮಗನಂತೆ, ನಿನಗೆ ಕ್ರೈಸ್ತ ಜೀವನ ಜೀವಿಸಲು ನಿನಗೆ ಸಹಾಯ ಮಾಡುವದಕ್ಕಾಗಿ, ದೇವರು ತನ್ನ ಆತ್ಮನನ್ನು ನಿನಗೆ ಕಳುಹಿಸುವನು (ಗಲಾತ್ಯ 4:6; ಎಫೆಸ 3:16).

3. ನೀನು ದೇವರ ಪ್ರೀತಿಯ ಕುಟುಂಬದ ಒಂದು ಭಾಗವಾಗುವಿ.

4. ನೀನು ವಿಧೇಯನಾದದ್ದರಿಂದ ನಿನ್ನನ್ನು ಪ್ರೀತಿಸುವವರು ಸಂತೋಷ ಪಡುವರು. ದೇವರು ಸಂತೋಷಪಡುವನು, ಯೇಸುವು ಸಂತೋಷಪಡುವನು, ಪರಿಶುದ್ಧಾತ್ಮನು ಸಂತೋಷಪಡುವನು, ದೇವದೂತರು ಸಂತೋಷಪಡುವರು, ಕ್ರೈಸ್ತರು ಸಂತೋಷಪಡುವರು ಮತ್ತು ನೀನು, ನೀನೇ ಸಂತೋಷಪಡುವಿ (ಅಪೊಸ್ತಲರ ಕೃತ್ಯಗಳು 8:39).

5. ನೀನು ನಿನ್ನ ಪಾಪಗಳ ಮೇಲೆ ಚಿಂತಿಸುವದನ್ನು ಬಿಟ್ಟು ಬಿಡುವಿ ಮತ್ತು ನಿನ್ನ ಪಾಪಗಳನ್ನು ಜಯಿಸಲು ನಿನಗೆ ಸಹಾಯವಿರುವುದು.

6. ಜೊತೆ ಕ್ರೈಸ್ತರು ಕ್ರೈಸ್ತ ಜೀವಿತ ಜೀವಿಸಲು ನಿನಗೆ ಸಹಾಯ ಮಾಡುವರು,

ಮತ್ತು ಕ್ರೈಸ್ತನಾಗಿ, ನೀನು ನಿನ್ನ ಜೀವನ ಹಾಗೂ ಬೋಧನೆಯಿಂದ ಇತರರಿಗೆ ಸಹಾಯ ಮಾಡಲು ಶಕ್ತನಾಗುವಿ.

7. ಜೀವಿತವು ಅನಿಶ್ಚಿತವಾದದ್ದು, ಪ್ರಸ್ತುತ ಸಮಯ ಮಾತ್ರವೇ ನಿನಗೆ ನಿಶ್ಚಿತವಾದ ಸಮಯವಾಗಿರುವುದು.

8. ನಿತ್ಯತ್ವವು ಬಹುಮಾನವನ್ನು ಅನುಭವಿಸಲು ದೀರ್ಘವಾದ ಸಮಯವಾಗಿದೆ, ಆದರೆ ಶಿಕ್ಷಿಸಲ್ಪಡುವುದೂ ಸಹ ದೀರ್ಘವಾದ ಸಮಯವಾಗಿರುತ್ತದೆ.

9. ಯೇಸುವು ಯಾವುದೇ ಸಮಯದಲ್ಲಿ ಪುನಃ ಬರಬಹುದು ಎಲ್ಲಾ ಸಮಯದಲ್ಲಿ ನಾವು ಸಿದ್ಧರಾಗಿರುವ ಅಗತ್ಯತೆ ಇರುವುದು (ಮತ್ತಾಯ 24:42-46).

10. ವಿಧೇಯನಾಗಲಿಕ್ಕೆ ತಡಮಾಡುವದರಿಂದ ನಾವು ಏನನ್ನು ಸಾಧಿಸಲಾರೆವು, ನಾವು ತಡ ಮಾಡಿದರೆ, ಎಲ್ಲವನ್ನೂ ನಾವು ಕಳೆದುಕೊಳ್ಳಬಹುದು.

11. ನಿನ್ನಿಂದ ಲೋಕವು ತೆಗೆದುಕೊಳ್ಳಲಾರದಂಥ ಆಂತರಿಕ ಸಮಾಧಾನವಿರಲಿಕ್ಕೆ ನೀನು ಶಕ್ತನಾಗುವಿ.

12. ದೇವರೊಂದಿಗೆ ನಿನಗೆ ನಿಕಟವಾದ ವೈಯಕ್ತಿಕ ನಡೆಯುವಿಕೆ ಇರುವುದು.

ಕಲಿಯುವವನು ಅವನಿಗೆ ತೋರಿಸಲ್ಪಟ್ಟ ಈ ಹನ್ನೆರಡು ಪ್ರಯೋಜನೆಗಳಿಗೆ ಸ್ಪಂದಿಸದಿದ್ದರೆ, ತಡಮಾಡುವದನ್ನು ಯಾಕೆ ಆಯ್ದುಕೊಂಡಿದ್ದಾನೆ ಎಂದು ಪ್ರಶ್ನಿಸಿರಿ. ಸುವಾರ್ತೆಗೆ ವಿಧೇಯನಾಗಲು ಈಗಿನ ಸಮಯಕ್ಕಿಂತ ಹೆಚ್ಚು ಉತ್ತಮವಾದ ಸಮಯವನ್ನು ಯೋಚಿಸಬಹುದೋ ಎಂದು ಶಿಕ್ಷಕನು ಕೇಳಬೇಕು. ಅವನಿಗಿರ ಬಹುದಾದ ಯಾವುದೇ ಆಕ್ಷೇಪಣೆಯನ್ನು ನಯವಾಗಿ ಬಗೆಹರಿಸಿರಿ. ಅವನು ಇನ್ನೂ ಕಾದು ಕೊಂಡಿರಲು ಬಯಸಿದರೆ, ತನ್ನ ವಿಧೇಯತೆಗಾಗಿ ಒಂದು ಸಮಯವನ್ನು ನೇಮಿಸುವನೋ ಎಂದು ಕೇಳಿರಿ. ನಿಮ್ಮ ಚಿತ್ತಕ್ಕೆ ಅವನು ಉತ್ತರ ಕೊಡುತ್ತಾನೆ ಎಂಬ ಕಾರಣದಿಂದಲ್ಲ, ಆದರೆ ಕೃಪಾಳುವೂ ದಯೆಯುಳ್ಳವನೂ ಕಾರುಣ್ಯಮಯನೂ ಆದ ದೇವರ ಪ್ರೀತಿಗೆ ಉತ್ತರ ಕೊಡಲು ಅವನು ಬಯಸುವದರಿಂದ, ಅವನು ವಿಧೇ ಯನಾಗಲು ಬಯಸುವಿರಿ ಎಂದು ಅವನಿಗೆ ಹೇಳಿರಿ.

ನೀವು ಮತ್ತು ಇತರರು ನಿಮ್ಮ ಪ್ರಾರ್ಥನೆಗಳಲ್ಲಿ ಅವನನ್ನು ಕೂಡಿಸಲು ಮುಂದುವರಿಸಿದರೆ ಅವನಿಗೆ ಅಭ್ಯಂತರವಿಲ್ಲವೋ ಎಂದು ಅವನನ್ನು ಕೇಳಿರಿ. ನೀವು ಅವನನ್ನು ಪ್ರೀತಿಸುವಿರಿ ಎಂದೂ ಪರಲೋಕದಲ್ಲಿ ಅವನೊಂದಿಗೆ ನಿತ್ಯತ್ವವನ್ನು ಹಂಚಿಕೊಳ್ಳುವ ನಿಶ್ಚಿತತೆಯುಳ್ಳವರಾಗಿರಲು ಬಯಸುವಿರಿ ಎಂಬುದನ್ನೂ ಅವನಿಗೆ ತಿಳಿಯಪಡಿಸಿರಿ. ಸುವಾರ್ತೆಗೆ ವಿಧೇಯನಾಗುವದನ್ನು ಅದು ಇನ್ನೂ ತಡಮಾಡಿದರೆ, ಇನ್ನೊಂದು ಅಧ್ಯಯನಕ್ಕಾಗಿ ಸಮಯವನ್ನು ಏರ್ಪಡಿಸಿಕೊಳ್ಳಿರಿ.

***ಇನ್ನೊಬ್ಬನ ಕನಸಿಗಾಗಿ ತ್ಯಾಗಗಳು ಮಾಡಲ್ಪಟ್ಟಿದ್ದು***

ಆಲ್ಬರ್ಟ್ ಡ್ಯೂರೆರ್ ಒಬ್ಬ ಪೈಂಟರ್ ಆಗುವ ಕನಸನ್ನು ಕಂಡನು. ಜರ್ಮನಿಯ ನೂರೆಂಬರ್ಗಕ್ಕೆ ಹೋಗಿ ಅಲ್ಲಿ ಬಡವನಾಗಿದ್ದ ಒಬ್ಬ ಹಿರಿಯ ಮನುಷ್ಯನೊಂದಿಗೆ ವಾಸಿಸಿದನು. ಒಬ್ಬನು ಕೆಲಸ ಮಾಡಬೇಕು ಮತ್ತು ಇನ್ನೊಬ್ಬನು ಅಭ್ಯಾಸಮಾಡ ಬೇಕೆಂದು ನಿರ್ಣಯಿಸಲಾಯಿತು, ಡ್ಯೂರೆರ್ ಶಾಲೆಗೆ ಹೋಗಬೇಕು ಹಿರಿಯ ಮನುಷ್ಯನು ತಾನು ಕಠಿಣ ಕೆಲಸ ಮಾಡಬೇಕು ಎಂದು ಒತ್ತಾಯಿಸಿದನು, ಆನಂತರದಲ್ಲಿ ಹಿರಿಯ ಮನುಷ್ಯನು ತನ್ನ ಕಷ್ಟಕರವಾದ ಕೆಲಸದಿಂದ ತನ್ನ ಕೈಗಳು ಬಿರುಸಾಗಿ ಮಾಡಲ್ಪಟ್ಟಿದ್ದು ಇನ್ನು ಮುಂದೆ ತಾನೆಂದೂ ಪೈಂಟ್ ಮಾಡಲಾರೆನೆಂಬುದನ್ನು

ಕಂಡುಕೊಂಡನು. ಸಂಭವಿಸಿದ್ದನ್ನು ತಿಳಿದುಕೊಂಡಾಗ, ಡ್ರೂರೆರ್ ಬಹಳ ದುಃಖದಿಂದ ತುಂಬಿಕೊಂಡನು. ಒಂದು ದಿನ ತನ್ನ ಸ್ನೇಹಿತನ ಕೋಣೆಯೊಳಗೆ ಅವನು ಪ್ರವೇಶಿಸಿದನು ಮತ್ತು ತನ್ನ ಸ್ನೇಹಿತನು ಪ್ರಾರ್ಥನೆಯಲ್ಲಿ ಭಕ್ತಿಯಿಂದ ತನ್ನ ಕೈಗಳನ್ನು ಜೋಡಿಸಿದ್ದನ್ನು ಕಂಡನು. ಮೆಚ್ಚಿಕೆಯಿಂದ ಜೋಡಿಸಿದ ಆ ಕೈಗಳ ಪೈಂಟ್ ಮಾಡಿದನು. ಅವು ಸ್ವಾರ್ಥರಹಿತ ಸೇವೆಯ ಹಾಗೂ ಉದಾತ್ತ ಗುಣದ ಸಂಕೇತವಾಗಿ ಉಳಿದವು.

© 2009 Truth for Today